JUNE 19, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

1. ಇಂದು, ವಿಶ್ವ ಸಿಕೆಲ್ ಸೆಲ್ ಜಾಗ್ರತಿ ದಿನ. 'ಜಾಗತಿಕ ಕ್ರಿಯೆ, ಸ್ಥಳೀಯ ಪರಿಣಾಮ: ಪರಿಣಾಮಕಾರಿ ಸ್ವಯಂ ವಾದ ಮಂಡನೆಗಾಗಿ, ಸಮುದಾಯಗಳನ್ನು ಸಬಲೀಕರಿಸೋಣ' ಎಂಬ ಧ್ಯೇಯದೊಂದಿಗೆ, ಐದು ವರ್ಷದೊಳಗಿನ ಮಕ್ಕಳು, ಸಿಕೆಲ್ ಸೆಲ್ ರೋಗ ಬಾಧೆಯಿಂದ, ರಕ್ತಹೀನತೆಯಿಂದ ಬಳಲುವುದನ್ನು ತಡೆದು, ಪಾಲಕರಲ್ಲಿ ಜಾಗೃತಿ ಮೂಡಿಸಲು, ಆಚರಿಸಲಾಗುತ್ತಿದೆ.

<><><>

2. ಉತ್ತರಕನ್ನಡ ಜಿಲ್ಲೆ, ಹೊನ್ನಾವರ ಸಮುದ್ರ ತೀರದ, 6 ಕಿಲೋ ಮೀಟರ್ ಉದ್ದದ ಕಡಲ ತಡಿ ಹಾಗೂ ಅರಣ್ಯ ಪ್ರದೇಶ ಸೇರಿ, ಒಟ್ಟು 5 ಸಾವಿರದ 9 ನೂರಾ 59 ಹೆಕ್ಟರ್ ಪ್ರದೇಶವನ್ನು, 'ಅಪ್ಸರಕೊಂಡ–ಮುಗಲಿ ಕಡಲ ವನ್ಯಜೀವಿ ಧಾಮ' ಎಂದು ಘೋಷಿಸುವ ಪ್ರಸ್ತಾವ ಸೇರಿದಂತೆ, ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಭೂ ಸ್ವಾಧೀನ ಪರಿಹಾರ ವಿತರಣೆ ವಿಷಯ, ಇನ್ನು ಕೆಲವೇ ಕ್ಷಣಗಳಲ್ಲಿ ಆರಂಭಗೊಳ್ಳಲಿರುವ, ಸಚಿವ ಸಂಪುಟ ಸಭೆಯ ಕಾರ್ಯಸೂಚಿ ಪಟ್ಟಿಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಗಿರಿಧಾಮದಲ್ಲಿ ಇಂದು ಪೂರ್ವ ನಿಗದಿಯಂತೆ ನಡೆಯಬೇಕಿದ್ದ ಸಭೆ, ಬೆಂಗಳೂರಿನ ವಿಧಾನಸೌಧದ, ಸಚಿವ ಸಂಪುಟ ಸಭಾಂಗಣಕ್ಕೆ, ವರ್ಗಾವಣೆಗೊಂಡಿದೆ.

<><><>

3. ಬೆಂಗಳೂರಿನ ಜೀವ ರಕ್ಷಾ ಟ್ರಸ್ಟ್ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ವಿವಿಧ ಸಂಸ್ಥೆಗಳ ಸಹಯೋಗದಲ್ಲಿ, ನಾಳೆ ಮತ್ತು ನಾಡಿದ್ದು, ಬೆಂಗಳೂರಿನ ಭಾರತೀಯ ತಂತ್ರಜ್ಞಾನ ಸಂಸ್ಥೆಯ, ಜೆ.ಎನ್. ಟಾಟಾ ಸಭಾಂಗಣದಲ್ಲಿ, ವಿಪತ್ತು ನಿರ್ವಹಣೆ ರಾಷ್ಟ್ರೀಯ ಕಾರ್ಯಾಗಾರ ಆಯೋಜಿಸಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜೀವ ರಕ್ಷಾ ಟ್ರಸ್ಟ್, ವ್ಯವಸ್ಥಾಪಕ ನಿರ್ದೇಶಕ, ಫ್ಲೈಟ್ ಲೆಫ್ಟಿನೆಂಟ್, ಡಾಕ್ಟರ್ ಎಂ.ಎ. ಬಾಲಸುಬ್ರಹ್ಮಣ್ಯ.

<><><>

ಡಾ.ಎಂ.ಎ. ಬಾಲಸುಬ್ರಹ್ಮಣ್ಯ ಧ್ವನಿ 35 ಸೆಕೆಂದುಗಳು

<><><>

4. ವಿಜಯನಗರ ಜಿಲ್ಲೆಯ, ವಿವಿಧ ವಲಯಗಳ, ಅಭಿವೃದ್ಧಿ ಸೂಚ್ಯಾಂಕ ಆಧರಿಸಿ, ಪ್ರಾದೇಶಿಕ ಅಸಮತೋಲನ ಪರಾಮರ್ಶಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು, ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷ, ಅರ್ಥಶಾಸ್ತ್ರಜ್ಞ, ಎಂ. ಗೋವಿಂದರಾವ್ ತಿಳಿಸಿದ್ದಾರೆ.

ಹೊಸಪೇಟೆಯ, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಸಭೆ ನಡೆಸಿ, ಅವರು ಮಾತನಾಡಿದರು. ಡಿ.ಎಂ.ನಂಜುಂಡಪ್ಪ ಅವರು, 2002ರಲ್ಲಿ ನೀಡಿದ ವರದಿ ಪ್ರಕಾರ, 176 ತಾಲೂಕುಗಳನ್ನು ಹಿಂದುಳಿದ, ಅತೀ ಹಿಂದುಳಿದ, ಅತ್ಯಂತ ಹಿಂದುಳಿದ ಹಾಗೂ ಅಭಿವೃದ್ಧಿ ಹೊಂದಿದ ತಾಲೂಕುಗಳೆಂದು, 4 ವರ್ಗಗಳಲ್ಲಿ ವರ್ಗೀಕರಿಸಿ, ಅದಕ್ಕನುಗುಣವಾಗಿ ಅನುದಾನ ಹಂಚಿಕೆಗೆ, ಶಿಫಾರಸು ಮಾಡಿದ್ದರು. ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ, ಸರ್ಕಾರ 31 ಸಾವಿರ ಕೋಟಿ ರೂಪಾಯಿ ವ್ಯಯಿಸಿದೆ ಎಂದರು.

<><><>

5. ಕಲ್ಯಾಣ ಕರ್ನಾಟಕದ ಕಲಬುರಗಿಯಲ್ಲಿ, ನೂತನವಾಗಿ ನಿರ್ಮಿಸಲಾಗುತ್ತಿರುವ, ಮೃಗಾಲಯ, ಡಿಸೆಂಬರ್‌ನಲ್ಲಿ ಪೂರ್ಣಗೊಂಡು, ಲೋಕಾರ್ಪಣೆಯಾಗಲಿದೆ ಎಂದು, ಅರಣ್ಯ ಖಾತೆ ಸಚಿವ, ಈಶ್ವರ ಖಂಡ್ರೆ ತಿಳಿಸಿದ್ದಾರೆ. ಬೆಂಗಳೂರಿನ ವಿಕಾಸಸೌಧದಲ್ಲಿ ಮಾತನಾಡಿದ ಸಚಿವರು, ಬನ್ನೇರುಘಟ್ಟ ಉದ್ಯಾನದಲ್ಲಿ ಸಂಭವಿಸಿದ, ವನ್ಯಜೀವಿಗಳ ಸರಣಿ ಅಸಹಜ ಸಾವಿನ ಹಿನ್ನೆಲೆ, ರಾಜ್ಯದ ಮೃಗಾಲಯ ಅಥವಾ ಜೈವಿಕ ಉದ್ಯಾನಗಳಲ್ಲಿ, ಯಾವುದೇ ವನ್ಯಜೀವಿ, ಅಸಹಜ ರೀತಿಯಲ್ಲಿ ಸಾವನ್ನಪ್ಪದಂತೆ, ಮುಂಜಾಗ್ರತೆ ವಹಿಸಲು, ಅರಣ್ಯಾಧಿಕಾರಿಗಳಿಗೆ, ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ, ಎಂದರು.

<><><>

6. ಉತ್ತರಕನ್ನಡ ಜಿಲ್ಲೆ, ಕಾಳಿ ಹುಲಿ ಸಂರಕ್ಷಿತ ಅಭಯಾರಣ್ಯ ವ್ಯಾಪ್ತಿಯ, ಕುಳಗಿ–ಅಂಬಿಕಾನಗರ ವ್ಯಾಪ್ತಿಯ, ಕುಳಗಿ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ, 14 ರಿಂದ 15 ವರ್ಷ ಪ್ರಾಯದ, ಹೆಣ್ಣಾನೆ ಮೃತಪಟ್ಟಿದೆ. ವಿದ್ಯುತ್ ತಂತಿ ತಗುಲಿ ಮೃತಪಟ್ಟಿರಬಹುದು ಎಂದು, ಉಪ ಅರಣ್ಯ ಸಂರಕ್ಷಣಾಧಿಕಾರಿ, ನಿಲೇಶ ಶಿಂಧೆ ತಿಳಿಸಿದ್ದಾರೆ.

<><><>

7. ಮುಂದಿನ ಒಂದು ವಾರ, ರಾಜ್ಯದ ಕರಾವಳಿ ಹೊರತುಪಡಿಸಿ, ಉಳಿದ ಜಿಲ್ಲೆಗಳಲ್ಲಿ, ಮಳೆಯ ಪ್ರಮಾಣ ಗಣನೀಯವಾಗಿ ಕಡಿಮೆಯಾಗಲಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಂದು, ದಕ್ಷಿಣಕನ್ನಡ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಗಳಿಗೆ, ಯೆಲ್ಲೋ ಅಲರ್ಟ್ ನೀಡಲಾಗಿದೆ. ಉಳಿದಂತೆ, ಎಲ್ಲ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ.

<><><>

8. ವಿಜಯಪುರ ಜಿಲ್ಲೆ, ಆಲಮಟ್ಟಿಯ, ಶ್ರೀ ಲಾಲಬಹಾದ್ದೂರ ಶಾಸ್ತ್ರೀ ಜಲಸಂಗ್ರಹಾಗಾರ, ಶೇಕಡ 54 ರಷ್ಟು ಭರ್ತಿಯಾಗಿದೆ. ಒಟ್ಟು 50 ಸಾವಿರ ಕ್ಯೂಸೆಕ್ ನೀರನ್ನು, ಕೃಷ್ಣ ನದಿಗೆ ಹರಿ ಬಿಡಲಾಗುತ್ತಿದೆ.

<><><>

ಉತ್ತರಕನ್ನಡ ಜಿಲ್ಲೆ, ಮಾಜಾಳಿ ಕರಾವಳಿ ತೀರದಿಂದ, ಭಟ್ಕಳದ ವರೆಗೆ, ಇಂದು ಸಮುದ್ರದಲ್ಲಿ ಹೆದ್ದೆರೆಗಳು ಏಳುವ ಸಂಭವವಿದ್ದು, ಮೀನುಗಾರರು ಸಮುದ್ರಕ್ಕೆ ತೆರಳದಂತೆ, ಪ್ರವಾಸಿಗರು ಕಡಲ ತೀರದಲ್ಲಿ ವಿಹರಿಸದಂತೆ, ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಆದೇಶಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆ, ನಾರಾಯಣಪುರದ ಶ್ರೀ ಬಸವಸಾಗರ ಜಲಾಶಯ, ಶೇಕಡ 77 ದಶಾಂಶ 2–5 ರಷ್ಟು ತುಂಬಿದೆ. ಅಣೆಕಟ್ಟೆಯ 13 ದ್ವಾರಗಳಿಂದ, 40 ಸಾವಿರದ 775 ಕ್ಯೂಸೆಕ್‌ನಷ್ಟು ನೀರನ್ನು, ಹೊರ ಬಿಡಲಾಗುತ್ತಿದೆ.

<><><>

ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲೂಕು, ಬೀಚನಹಳ್ಳಿ ಬಳಿಯ ಕಬಿನಿ ಜಲಾಶಯದಿಂದ, 25 ಸಾವಿರ ಕ್ಯೂಸೆಕ್ ನೀರನ್ನು ಹರಿ ಬಿಡಲಾಗುತ್ತಿದ್ದು, ನದಿ ಪಾತ್ರದ ಜನ ಮುನ್ನೆಚ್ಚರಿಕೆ ವಹಿಸುವಂತೆ, ನದಿ ಪಾತ್ರಕ್ಕೆ ತೆರಳದಂತೆ, ಅಭಿಯಂತರ ಚಂದ್ರಶೇಖರ ಕೋರಿದ್ದಾರೆ.

<><><>

ಬೆಳಗಾವಿ ಜಿಲ್ಲೆಯ, ಹುಕ್ಕೇರಿ, ಖಾನಾಪುರ, ನಿಪ್ಪಾಣಿ, ಚಿಕ್ಕೋಡಿ ತಾಲೂಕುಗಳಲ್ಲಿ, ಮಳೆ ಪ್ರಮಾಣ ಹೆಚ್ಚಿದ್ದು, ಅಧಿಕಾರಿಗಳು, ಜಲಾಶಯಗಳ ನೀರಿನ ಮಟ್ಟ ಹಾಗೂ ಪ್ರವಾಹ ಪರಿಸ್ಥಿತಿ ನಿರಂತರ ಅವಲೋಕಿಸಿ, ಅತೀ ವೃಷ್ಟಿ ಹಾಗೂ ಪ್ರವಾಹ ನಿರ್ವಹಣೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು, ಜಿಲ್ಲಾಧಿಕಾರಿ ಮೊಹಮ್ಮದ್ ರೋ ’ನ್ ಸೂಚಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.

<><><>